ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

ಚುಕ್ಕೆ ಗುರುತಿನ ಪ್ರಶ್ನೆ

ದಿನಾಂಕ : 04-03-2021 ಪ್ರಶ್ನೆ ಸಂಖ್ಯೆ : 98 (779)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಬಿ. ಎಂ. ಫಾರೂಖ್(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 04-03-2021

ಉತ್ತರಿಸುವ ಸಚಿವರು: ಮುಖ್ಯಮಂತ್ರಿಗಳು

ವಿಷಯ : ನವೀಕರಿಸಬಹುದಾದ ಇಂಧನ ಉತ್ಪಾದನೆಗಳ ಉತ್ತೇಜನ ನೀಡುವ ಬಗ್ಗೆ

(ಅ) ಇತ್ತೀಚೆಗೆ ಇಂಧನ ಇಲಾಖೆ Wheeling & Banking ಬಗ್ಗೆ ಹೊಸ ಸುತ್ತೋಲೆಯನ್ನು ಹೊರಡಿಸಿ Banking ವಿಷಯವನ್ನು ತೆಗೆದಿರುವುದು ನಿಜವೇ;

(ಆ) ಪಕ್ಕದ ರಾಜ್ಯಗಳಲ್ಲಿ Wheeling & Banking facilities ಇದ್ದು, ನಮ್ಮ ರಾಜ್ಯದಲ್ಲಿ ಮಾತ್ರ ಇದನ್ನು ತೆಗೆಯಲು ಕಾರಣವೇನು; ನಮ್ಮ ರಾಜ್ಯದ ಈ ಸುತ್ತೋಲೆ Renewable Energy Company ಗಳಿಗೆ ತುಂಬಾ ತೊಂದರೆಯಾಗುತ್ತಿರುವುದಲ್ಲದೇ ಬಂಡವಾಳ ಹೂಡುವುವವರ ಸಂಖ್ಯೆಯು ಇಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಕೇಂದ್ರ ಸರ್ಕಾರ Renewable Energy ಗಳಿಗೆ ಒತ್ತು ನೀಡಿದ್ದು ರಾಜ್ಯ ಸರ್ಕಾರಗಳಿಗೆ ಇದನ್ನು ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿ ಮಾಡಲು ಸುತ್ತೋಲೆಯಲ್ಲಿ ತಿಳಿಸಿದ್ದರೂ ಸಹ ಕಳೆದ ಸುಮಾರು 5 ವರ್ಷಗಳಿಂದ ಸರ್ಕಾರವು ಯಾವುದೇ (PPA) ಮಾಡದೇ Renewable Energy ಗೆ (Wind) ಉತ್ತೇಜನ ನೀಡದಿರಲು ಕಾರಣವೇನು;

(ಈ) ಕಡಿಮೆ ಬೆಲೆಯ ಹಾಗೂ ಪರಿಸರ ಹಾನಿ ಮಾಡದ ಈ ವಿದ್ಯುತ್ ಖರೀದಿಸಲು ಸರ್ಕಾರ ಮನಸ್ಸು ಮಾಡದಿರಲು ಕಾರಣಗಳೇನು;

(ಉ) ಕರ್ನಾಟಕ ರಾಜ್ಯಗಳಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ HYBRID Project (Solar + Wind) ವಿದ್ಯುತ್ ಖರೀದಿಸಲು ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇಲ್ಲದಿದ್ದಲ್ಲಿ, ಈ ನವೀಕರಿಸಿದ ಇಂಧನ ಉತ್ಪಾದಿಸಲು ಉತ್ತೇಜನ ನೀಡಲು ಸರ್ಕಾರ ಯಾವಾಗ ಕ್ರಮ ವಹಿಸಲಾಗುವುದು?